At Ranjit
SHANKAR PARVATI
ನೇ ಅಮೋಘ ವಾರ
* ಅರುಣ್ * ಸಾಧನಬೋಸ್
— ಪಾತ್ರವಹಿಸಿರುವ —
ಶಂಕರ್ ಪಾರ್ವತಿ

Regd. No. M 1299 SATYAVADI Fonnded 1917

ಸತ್ಯವಾದಿ
SATYAVADI

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 281] ಶುಕ್ರವಾರ 23—8—46 [ಬಿಡಿ ಪ್ರತಿ 3 ಪೈ

ಅಕ್ಕರ ಸಾಮಾಜಿಕ
ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.
ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

' ಪ್ರಸಿದ್ಧ ' ವರದಿಕಾರರ ' ವಿಚಿತ್ರ ' ವರದಿ ! !

' ಸ್ಟಾಫ್ ' ಪ್ರತಿನಿಧಿ ಎಂದರೆ ' ದೊಣ್ಣೆ ' ಪ್ರತಿನಿಧಿ ಎಂದು ಅರ್ಥ ಮಾಡೋಣವೇ ?

ಸರ್ಕಾರ ' ವಿಶ್ವಕರ್ಣಾಟಕ ' ದ ಮೇಲೆ ಗದಾ ಪ್ರಹಾರ ಮಾಡಿತು. ಸಂಸ್ಥಾನದ ಕನ್ನಡ ಪತ್ರಿಕೆಗಳವರೆಲ್ಲರಿಗೂ ಇದರಿಂದ ಪೂರ್ಣ ಪುನರೊಂದಿದೆ. ಪತ್ರಿಕಾ ಸಮ್ಮೇಳನದವರು ಹರತಾಳ ಏರ್ಪಡಿಸಿದರು. ಅದು ಇದೇ 46 ರ ಆಗಸ್ಟ್ 21 ರಂದು ಅತ್ಯಂತ ಯಶಸ್ವಿಯಾಗಿ ಬೆಂಗಳೂರು ಮೈಸೂರು ಎರಡೆಡೆಯೂ ಜರುಗಿತು. ಸಂಸ್ಥಾನದ ಪತ್ರಿಕಾ ಜೀವನದಲ್ಲೇ ಅಂದು ಕಾಂತ್ರಿಯು ಕಿಡಿ ಕಿಡಿಯಿತು. ಪ್ರಗತಿಯು ಮೊಗ್ಗು ಅರಳಿತು. ಸಕಲರ ಸೌಭಾಗ್ಯಕ್ಕೂ ಇದು ಶುಭವಾರ್ತೆ. ಈ ಪ್ರಗತಿ ವಾತಾವರಣದಲ್ಲಿ ಸ್ವಾರ್ಥಿಗಳು ಮತ್ತು ಕುಹಕಿಗಳಿಗೆ ಏಳಿಗೆ, ವಾತಾವರಣ ಕುಲ [illegible]ಡಲು ಸಹಕಾರಿ. ಅಂಥವರನ್ನು [illegible]ಟ್ಟ ಹಾಕುವ ಕಾರ್ಯ ಕೈಗೊಳ್ಳಲೇ [illegible].

[illegible]ಸೂರು ನಗರದ ತಾಯಿನಾಡು [illegible]' ಪ್ರತಿನಿಧಿ ಮೈಸೂರಿನಲ್ಲಿ ನಡೆದ [illegible]ಳವನ್ನು ವರದಿ ಮಾಡಿರುವುದು [illegible]ೇ 22 ನೇ ಗುರುವಾರದ ತಾಯಿ[illegible]ನಾಡುವಿನಲ್ಲಿ ಪ್ರಕಟವಾಗಿದೆ. ಆ ವ[illegible]ರದಿಯಲ್ಲಿ ಸ್ಥಳೀಯ ದಿನಪತ್ರಿಕೆಗಳಾ[illegible]ದ ' ಮೈಸೂರು ಪತ್ರಿಕೆ ಮತ್ತು 'ಸಾ[illegible]' ಗಳು ಈ ದಿನ ಪ್ರಕಟಣೆ ನಿಲ್ಲಿಸಿ[illegible]ವು' ಎಂದಿದೆ. ಆದಿನ 'ಸತ್ಯವಾದಿ'ಯೂ [illegible]ಕಟಣೆ ನಿಲ್ಲಿಸಿತ್ತು. ಇದನ್ನು ಆರಿಯು[illegible]ಕಣ್ಣು ' ತಾಯಿನಾಡು 'ಸ್ಟಾಫ್' [illegible]ದಿಕಾರಿನಿಗಿರಲಿಲ್ಲವೇ ? ಅನೇಕರು [illegible]ವರದಿಕಾರನನ್ನು ಹೊಗಳುವುದನ್ನು [illegible]ವಾಗ ' ಪ್ರಸಿದ್ಧ ವರದಿಕಾರ ' [illegible]ುದು ಕೇಳಿಬರುವುದು. ಈ ವ್ಯ[illegible]ರ ' ಸ್ಟಾಫ್ ' ಪ್ರತಿನಿಧಿ!

ನಿಂತದ್ದನ್ನು ಅರಿಯಲಾರದೆ ಹೋದ ಆತನನ್ನು ' ಸ್ಟಾಫ್ ' ಅಂದರೆ ' ದೊಣ್ಣೆ ' ಎಂಬರ್ಥದಲ್ಲಿ ಕರಿಯಬಹುದಲ್ಲಾ !

ಇದನ್ನು ನಾವು ' ಸತ್ಯವಾದಿ ' ಪತ್ರಿಕೆಯ ಮೇಲಿನ ಅಭಿಮಾನದಿಂದ ಖಂಡಿತಾ ಬರೆಯುತ್ತಿಲ್ಲ. ಪ್ರಸಿದ್ಧ ವರದಿಕಾರನೊಬ್ಬನ ವಿಚಿತ್ರ ವರದಿ ಸಕಲರಿಗೂ ಗೋಚರವಾಗಲೆಂದು ಬರೆದಿರುತ್ತೇವೆ.

ಈ ವರದಿಕಾರ ಅದೇ ದಿನ ಮಧ್ಯಾಹ್ನ ನೆಡೆದ ಕಾಲೇಜು ಮುಂದುಗಡೆಯ ' ವಿಶ್ವಕರ್ಣಾಟಕ ದಿನಾಚರಣೆ ' ಯ ಸಭೆ ವರದಿಯನ್ನು ಕಳುಹಿಸಿದ್ದಾನೆ. ಅದೂ ಅಂದಿನ ತಾಯಿನಾಡುವಿನಲ್ಲಿ ಪ್ರಕಟವಾಗಿದೆ. ಆದರೆ ಆದೇ ಬೆಳಿಗ್ಗೆ ಸ್ಥಳೀಯ ಪತ್ರಿಕೋದ್ಯೋಗಿ ಸಂಘದಲ್ಲೂ ' ವಿಶ್ವಕರ್ಣಾಟಕ ದಿನಾಚರಣೆ ' ಗಾಗಿ ಸಭೆ ಸೇರಿತ್ತು ; ಭಾಷಣಗಳೂ ಠರಾವುಗಳೂ ಆದುವು. ಅವು ಈ ಪ್ರತಿನಿಧಿ ಕಳುಹಿದ ವರದಿಯಲ್ಲಿ ಅಡಕವಾಗಿಲ್ಲ. ಇವು ವರದಿಕಾರನ ಲಕ್ಷಣಗಳೇ ? ತಾಯಿನಾಡು ಪತ್ರಿಕೆಯವರು ಇಂಥಾ ವರದಿಕಾರನ ಈ 'ವಿಚಿತ್ರ'ಕ್ಕೆ ಏನು ಕಾರ್ಯ ಕೈಗೊಳ್ಳುವರು ? ಕಾರ್ಯನಿರತ ಪತ್ರಿಕೋದ್ಯೋಗಿ ಸಂಘದವರು ಈ ' ಕೀಳು – ಮೇಲು ' ಮನೋಭಾವದ ವರದಿಕಾರನನ್ನು ಸುಮ್ಮನೆ ಬಿಟ್ಟುಬಿಡುವರೇ ? ರಸ್ತೆರಸ್ತೆಯಲ್ಲೂ, ನಿಂತುಕುಳಿತಲ್ಲೆಲ್ಲೆಲ್ಲೂ ' ಎಲ್ಲರನ್ನೂ ಟೀಕಿಸುವ ಆ ವರದಿಕಾರನೇ ತನ್ನ ಈ 'ವಿಚಿತ್ರ'ತೆ ಈ ಮೂಲಕ ಅರಿವಿಗೆ ಬಂದಮೇಲೆ ಸಾರ್ವಜನಿಕರ, ವಾಚಕರ, ಮುಂದೆಯೂ ಬಂದ ಮೇಲೂ ತನ್ನ ಮನಸ್ಸಿನಲ್ಲೇ ಏನು ಜವಾಬು ಕೊಟ್ಟುಕೊಂಡಿದ್ದಾನು ? ಅಥವಾ ಬಹಿರಂಗವಾಗಿ ಏನನ್ನಾದರೂ ಹೇಳಬಲ್ಲನೇ ? ಮೌನತಾಳಿದರೂ ಚಿಂತೆ

ಮಕ್ಕಳ ಕಳವು

ತಿರುಚನಾಪಲ್ಲಿಯಲ್ಲಿ ಮಕ್ಕಳನ್ನು ಕಳ್ಳರು ಎತ್ತಿಕೊಂಡು ಹೋಗುತ್ತಿದ್ದಾರೆ. ಆವರಲ್ಲಿ ಕೆಲವರು ದೊರತಿರುವರು. ಆದರೆ ಅರಿವೆಯಿಲ್ಲದ ಸ್ಥಿತಿಯಿಲ್ಲಿದ್ದಾರೆ, ' ಡಾಕ್ಟರು ' ' ಆಶ್ರಮ ' ಈ ಎರಡು ನುಡಿಗಳನ್ನು ಮಾತ್ರ ನುಡಿಯಬಲ್ಲವರಾಗಿದ್ದಾರೆ. ವೈದ್ಯರು ಇವರನ್ನು ಪರೀಕ್ಷಿಸುತ್ತಿರುವರು.

ಜಿಲ್ಲಾ ಮೋಟಾರು ಕೆಲಸಗಾರರ ಸಂಘ, ಮೈಸೂರು

ನಿನ್ನೆಯ ದಿವಸ ಕಾಂಗ್ರೆಸ್ ಕಛೇರಿಯಲ್ಲಿ ಕೆಲಸಗಾರರು ಶ್ರೀ ಎಂ. ಕೆ. ರಾಮಸ್ವಾಮಯ್ಯನವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದರು. ಶ್ರೀ ಎ. ರಾಮಣ್ಣ ಬಿ. ಶ್ರೀಕಂಠಪ್ಪ ಟಿ. ಎಸ್. ಸುಬ್ಬಣ್ಣ ಭಾಷಣಮಾಡಿದನಂತರ ಸಂಘದ ಅಧಿಕಾರವರ್ಗವನ್ನು ರಚಿಸಲಾಯಿತು- ಎಂದು ಕಾರ್ಯದರ್ಶಿಯವರು ತಿಳಿಸಿರುತ್ತಾರೆ

ಇಲ್ಲ. ಈ ಪ್ರಸಂಗದಿಂದ ಆತ ಸಾತ್ಥಕಲಿತರೆ ನಮ್ಮ ಉದ್ಯಮ ತನ್ನ ಕಾರ್ಯ ಸಾಧಿಸಿದಂತೆ.

ಸ್ಥಳೀಯ ಸೋದರ ದಿನಪತ್ರಿಕೆಗಳಾದ ' ಸಾಧ್ವಿ ' ಮತ್ತು ' ಮೈಸೂರು ಪತ್ರಿಕೆ ' ಗಳೂ, ಬೆಂಗಳೂರಿನ ಹಿರಿಯಣ್ಣ ' ತಾಯಿನಾಡು ' ಈ ಒಗೆಗೆ ತನ್ನ ಅಭಿಪ್ರಾಯ ಪ್ರಕಟಿಸಬೇಕಾದುದು ' ಪತ್ರಿಕಾಧರ್ಮ ' ವೆಂದು ಜ್ಞಾಪಿಸಿ ಆ ಪತ್ರಿಕೆಗಳ ' ಧರ್ಮಪಾಲನೆ ' ಯಲ್ಲಿ ನಂಬಿಕೆ ಇಟ್ಟು, ಈ ವ್ಯಾಖ್ಯಾನವನ್ನು ಸದ್ಯಕ್ಕೆ ಇಲ್ಲಿಗೆ ಬಿಡುತ್ತೇವೆ.

ಅಕ್ಷರ ಭಕ್ತರೂ, ಸುದ್ದಿ ಪ್ರೇಮಿಗಳೂ, ಸಾರ್ವಜನಿಕರೂ ಪತ್ರಿಕಾ ರಂಗದಲ್ಲಿನ ಇಂಥಾ ಪ್ರಸಂಗಗಳನ್ನು ಆಗಾಗ ಅರಿತು, ಪ್ರಸಂಗ ತಿಳಿಗೊಳ್ಳಲು ತಮ್ಮ ನೆರವನ್ನು ನೀಡುವುದು ಮಾನವ ಸಹಜವಾದ ಧರ್ಮ. ಅಂತಾಗಿ ಪತ್ರಿಕೋದ್ಯಮ ಪ್ರಗತಿಮಾರ್ಗದಲ್ಲಿ ಪ್ರಭಾವಯುತವಾಗಿ ಬೆಳೆಯಲೆಂದೇ ನಮ್ಮ ಹಂಬಲ.

ಕಾಂಗ್ರೆಸ್ ಮಹಾಧಿವೇಶನ

ಲಕ್ನೋ ಆ. 21 — ಮುಂದಿನ ಕಾಂಗ್ರೆಸ್ ಮಹಾಧಿವೇಶನ ವಿಾರತ್‌ನ್ರಲ್ಲಿ ಜರುಗುವುದಾಗಿ ಗೊತ್ತಾಗಿದೆ.

ಅಮೆರಿಕದ ಎರಡು ಖಂಡನಾ ಪತ

ವಾಷಿಂಗ್ಟ್ ಆ. 21 — ಯುಗಾಸ್ಲಾವ್ ಗಡಿಯಲ್ಲಿ ಹಾರುತ್ತಿದ್ದ ಅಮೇರಿಕ ವಿಮಾನಗಳನ್ನು ಇಳಿಯಲು ಒತ್ತಾಯಪಡಿಸಿ ಮತ್ತು ಗುಂಡು ಹಾರಿಸಿದ್ದಕ್ಕಾಗಿ ಅಮೇರಿಕ ಈ ದಿನ ಎರಡು ಖಂಡನಾ ಪತ್ರಗಳನ್ನು ಯುಗಸ್ಲೋವಿಯಾಕ್ಕೆ ಕಳಿಸಿದೆ.

ಪರಿಸ್ಥಿತಿ ಉತ್ತಮಗೊಂಡಿದೆ

ಕಲ್ಕತ್ತಾ ಆ 22 — ಕಲ್ಕತ್ತಾದ ಪರಿಸ್ಥಿತಿ ಉತ್ತಮಗೊಳ್ಳುತ್ತಿದೆ. ಅಂಗಡಿಗಳು ತೆರೆಯಲ್ಪಡುತ್ತಿವೆ. ವಾಹನಗಳ, ಜನರ ಓಡಾಟ ಪ್ರಾರಂಭವಾಗಿದೆ.

ಶನಿವಾರ ಪ್ರಕಟಣೆ

ನವದೆಹಲಿ ಆ 22— ಹೊಸ ತಾತ್ಕಾಲಿಕ ಸರಕಾರದ ಸಂಬಂಧದಲ್ಲಿ ಅಧಿಕಾರಯುತ ಪ್ರಕಟಣೆಯು ಶನಿವಾರ ಹೊರಬೀಳುವುದು.

ವಿಶ್ವ ಸಂಸ್ಥೆ

ನ್ಯೂ ಯಾರ್ಕ್ ಆ 21 — ವಿಶ್ವ ಸಂಸ್ಥೆಗೆ ಸೇರಲು 9 ರಾಷ್ಟ್ರಗಳು ಹೊಸದಾಗಿ ಅರ್ಜಿ ಹಾಕಿವೆ.

ನೂತನ ಕಲಾಯಿ

ಬ್ರಿಟೀಷು ಶಾಸ್ತ್ರ ಪರಿಶೋಧಕರು ಹೊಸ ಬಗೆಯ ಕಲಾಯಿ ಯನ್ನೂ ಕಂಡು ಹಿಡಿದಿರುವರು. ಭೋಜನ ಪಾತ್ರೆಗಳಿಗೂ ಆ ಕಲಾಯಿಯನ್ನು ಹಾಕಬಹುದಂತೆ. ಬಹಳ ಕಾಲಗಳವರೆಗೂ ಆ ಕಲಾಯಿಯು ಇರುವುದು ಮಾತ್ರವಲ್ಲದೆ ನೋಡಲು ಕೂಡ ಆ ಕಲಾಯಿ ಮಾಡಲ್ಪಟ್ಟ ಪಾತ್ರೆಗಳು ಅಂದವಾಗಿರುವವಂತೆ.

ವಾರ್ಷಿಕೋತ್ಸವ

ಮೈಸೂರು ಆ. 23 — ಇದೇ ತಾರೀಖು 24 ಮತ್ತು 25 ರಲ್ಲಿ ಅಶೋಕ ರಸ್ತೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ವೈಸೂರು ವೈಶ್ಯ ಪತ್ರಿಕೆಯ ಆರನೆ ವಾರ್ಷಿಕೋತ್ಸವ

ಭಾವೀ ಹಿಂದ್ ಸರಕಾರದ ವಿದೇಶ ದೂತ

ಕಾಂಗ್ರೆಸ್ಸಿಗೆ ಅಧಿಕಾರ ಕೇಂದ್ರದಲ್ಲಿ ಸಿಗುವುದು ಖಾತ್ರಿ ಆಗಿರುವುದರಿಂದಲೊ ಏನೋ, ಕಾಂಗ್ರೆಸು ಮುಖಂಡರು ಪರ ದೇಶೀಯ ನೀತಿಯ ಬಗ್ಗೆ ಈಗಲೇ ಅತ-ರ ವ್ಯಕ್ತಪಡಿಸತ್ತಿರುವರು. ಸರಹದ್ದು ಗಾಂಧಿಗಳಾದ ಖಾನ ಅಬ್ದುಲ್ ಗಫರ ಖಾನರು ಮೊನ್ನೆ ಅಲ್ಲಿಯ ಸರಕಾರದ ಅತಿಥಿಗಳಾಗಿ ಆಫಘಾನಿಸ್ತಾನದ ಸ್ವಾ ತಂತ್ರ್ಯ ಮಹೋತ್ಸವದ ನಿಮಿತ್ತ ಕಾ ಬೂಲಿಗೆ ಭೇಟಿ ಕೊಟ್ಟು ಬಂದರು. ಖಾನರೊಂದಿಗೆ ಅವರ ಚಿರಂಜೀವಿಯ ರೂ, ಸರಹದ್ದು ಕಾಂಗ್ರೆಸ್ಸ ಕಮಿಟಿಯ ಅಧ್ಯಕ್ಷರೂ ಇದ್ದರು. ಭಾರತದ ಭಾವಿ ಆಳಂಪರೊಡನೆ ಸ್ನೇಹ ಬೆಳಸ ಲೆಳಸಿ, ಆಫಘಾನಿಸ್ತಾನದ ಥೊರೆ, ಜಹಿ ರ್ ಶಹರು, ಈ ಕಾಂಗ್ರೆಸ್ ಮುಖಂಡ ರಿಗೆ ಕಾಣಿಕೆಗಳನ್ನರ್ಪಿಸಿದರು. ಈ ಭೇಟಿಗೆ ಕೇಂದ್ರ ಸರಕಾರದವರು ಮುಂ ಚಿತವಾಗಿ ಒಪ್ಪಿಗೆ ಕೊಟ್ಟಿದ್ದರಿಂದ ಡಿಲ್ಲಿ ಯ ಸರಕಾರಿ ವರ್ಗಗಳಿಂದ ಗೊತ್ತಾಗು ತ್ತದೆ. ಸ್ವಲ್ಪ ದಿನಗಳ ಹಿಂದೆ ಭಾರ ತದ ವಾಯವ್ಯ ಗಡಿಯ ಹತ್ತಿರದ ರಷ್ಯದ

ರಿಜಿಸ್ಟರ್ಡ್

100 ವರ್ಷಗಳ ಖ್ಯಾತಿಯ ಒಂದು ಹಿಮಾಲಯಾ ಮೂಲಿಕೆಯು ಗೂರಲು ಮತ್ತು ಮೂಲವ್ಯಾಧಿಯನ್ನು 11-9-46 (ಪೂರ್ಣಿಮಿ ದಿವಸ) ಒಂದೇ ಸಾರಿ ಸೇವಿಸುವುದರಿಂದ ಪೂರ್ಣ ಗುಣಪಡಿ ಸುವರು.

ಸೂಚನೆ — ಬೃಂದಾವನದ ಗುರು ಕುಲ ವೈದೀಕ ವಿಶ್ವವಿದ್ಯಾನಿಲಯದ ಗೌತಮ ಶಾಸ್ತ್ರಿಗಳು ಈ ಮೂಲಿಕೆ ಯಿಂದ 11 ರಲ್ಲಿ 9 ಮಂದಿ ರೋಗಿಗ ಳು ಗುಣ ಹೊಂದಿರುವರು ಎಂದು ಒರೆ ದಿದ್ದಾರೆ ಇಂಗ್ಲೀಷಿನಲ್ಲಿ ಬರೆಯಿರಿ.

Shri Sidh Baba, Sewa Ashram
P. O. Chitrakot, (U. P.)

Get Medical Diplomas

At home : — Ayurvedic Homeopathic, Unani, etc Prospectus Free.

Old Indian Medical College
Kotgarh, Simla

ಶ್ರೀಮತಿ ಅರುಣಾ ಆಸಫಾಲಿ ಮೈಸೂರಿಗೆ

ಮೈಸೂರು ಆ 23 — ಶ್ರೀಮತಿ ಅರುಣಾ ಆಸಫ್ ಅಲಿ ಮದ್ರಾಸಿನ ಪ್ರ ಯಾಣವನ್ನು ಇಟ್ಟುಕೊಂಡಿರುವರಷ್ಟೆ. ಆ ಕಾಲದಲ್ಲಿ ಮೈಸೂರಿಗೆ ಬರಬೇಕೆಂ ದು ತಿಲಕ್ ಸಂಘದ ಕಾರ್ಯದರ್ಶಿ ಶ್ರೀ ಭೂಪಾಲ್ ತವನಪ್ಪನವರು ಮು ಗ್ಧಾಸ್ ಕಾಂಗ್ರೆಸ್ ಭವನಕ್ಕೆ ತಂತೀ ಮಾಡಿರುವರು.

ವರ್ಚಸು ಬೀಳುತ್ತಿರುವ ಸುಳುವು ಬ್ರಿಟಿ ಷ್ ಸರಕಾರಕ್ಕೆ ಹತ್ತಿ, ಅದರ ಸತ್ಯಾ ಸತ್ಯತೆಯನ್ನು ಕಂಡುಹಿಡಿಯಲು ವಿಚಾ ರಣೆ ನಡೆದಿತ್ತೆಂದು ಪತ್ರಿಕೆಗಳಲ್ಲಿ ಪ್ರಸಿ ದ್ಧವಾಗಿತ್ತು. ಈ ಹಾರಿಕೆಯ ಸುದ್ದಿ ಗಳನ್ನು ಸಮರ್ಥಿಸಲು ಅಂಥದೇನೂ ಪತ್ತೆಹತ್ತಿಲ್ಲವಂತೆ. ಆದರೂ ನೆರೆಯ ಸ್ವತಂತ್ರ ದೇಶಗಳೊಂದಿಗೆ ಹತ್ತಿರದ ಗೆಳೆಯತನ ಬೆಳಿಸಲು ಸರಕಾರದವರು ಆತುರರಿರುವರು. ಆ ದೃಷ್ಟಿಯಿಂದ ಆಫಘಾನಿಸ್ತಾನಕ್ಕೆ ಆಯಕಟ್ಟಿನ ಮಹ ತ್ವವಿದೆ. ಆದ್ದರಿಂದ ಕಾಂಗ್ರೆಸ್ಸಿನ ಹೈ ಕಮಾಂಡಿನವರ ಸೂಚನೆ ಮಾಡಿದ ಕೂಡಲೇ ಸರಕಾರದವರು ಅದಕ್ಕೆ ಸಮ್ಮತಿ ಇತ್ತು, ಖಾನರಿಗೆ ಆಫಘಾನಿಸ್ತಾನದ ಯಾತ್ರೆಯ ಅಪ್ಪಣೆ ದೊರಕಿತು. [ಬಿ]

ಬೊಂಬಾಯಿ ಆ 20— ಭಾರತದ ಲ್ಲಿ ಸೀಮೇ ಎಣ್ಣೆ ಸೌಕರ್ಯವು ಮುಂದಿನ ವರ್ಷ ಉತ್ತಮಗೊಳ್ಳುವುದೆಂದು ಹೇಳ ಲಾಗಿದೆ.

ಮಧುರೆ ಆ 21— ಮಧುರೆಯ ಮು ನಿಸಿಪಾಲಿಟಿಯ ಜಾಡಮಾಲಿಗಳು ಶಾ|| 30 ರಿಂದ ಮುಷ್ಕರ ಹಿಡಿಯಲು ನಿರ್ಧ ರಿಸಿರುವರು.

ಹೈದರಾಬಾದು ಆ 21— ಮೈಸೂ ರು ಸಂಸ್ಥಾನಕ್ಕೆ ಈಚೆಗೆ ಭೇಟಿ ಕೊಟ್ಟ ಹೈದರಾಬಾದು ಆಹಾರ ನಿಯೋಗವು ವಾಪಸ್ಸು ಬಂದಿದೆ. ನಿಯೋಗವು ಮೈಸೂರಿಗೆ ತನ್ನ ಕೈಲಾದಷ್ಟು ಆಹಾ ರ ಸರಬರಾಜು ಮಾಡುವುದಾಗಿ ಮೈ ಸೂರು ಸರಕಾರಕ್ಕೆ ಭರವಸೆ ಕೊಟ್ಟಿರು ವುದೆಂದು ಹೇಳಲಾಗಿದೆ.

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ಸೋಮವಾರದ ಸಂಚಿಕೆ
ವಾರ್ಷಿಕಚಂದಾ
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--1 ?-

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇ ರಿಸದೇ ತಯಾರಿಸಲ್ಪಟ್ಟಿದೆ. ಅತಿ ಘಸವಾದ ಗುಣವುಳ್ಳದ್ದು. ಎಲ್ಲಾ ಸನಾ ತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿ ಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘ ವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿ ಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪಾ ರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂ ಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸು ವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂ ಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾ ತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

At Opera ⁼⁼ 2nd Glorious Week

King of the Texas Rangers

Next Change — CRASH DIVE

with Tyrone Power — — (Technicolour

Edited, Printed and Published by M. S. Krishna R
Satyavadi Press, Chamaraja Agrahar, Mysore,